# KARNATAKA LOKAYUKTA

No.UPLOK-2/DE.97/2020/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 02.03.2022

## RECOMMENDATION

Sub:- Departmental inquiry against Sri Keshava Murthy, the then Tahsildar(Retired), Devanahalli Taluk, Bangalore Rural District – reg.

Ref:- 1) Government Order No.RD 95 ADE 2016 dated 16.01.2020.

2) Nomination order No. UPLOK-2/DE.97/2020 dated 21.05.2020 of Hon'ble Upalokayukta, State of Karnataka.

3) Inquiry report dated 25.02.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 16.01.2020 initiated the disciplinary proceedings against Sri Keshava Murthy, the then Tahsildar(Retired), Devanahalli Taluk, Bangalore Rural District, [hereinafter referred to as Delinquent Government Official, for short as 'DGO'] and entrusted the Departmental Inquiry to this Institution.
~~~~~~

2. This Institution by Nomination Order No. UPLOK-2/DE.97/2020 dated 21.05.2020 nominated Additional Registrar of Enquiries-14, Karnataka Lokayukta, Bangalore, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of colluding with private persons to create documents of saguvali chit and sketch and thereby committed misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO Sri Keshava Murthy, the then Tahsildar(Retired), Devanahalli Taluk, Bangalore Rural District, is ' not proved '.

5. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and

exonerate DGO Sri Keshava Murthy, the then Tahsildar(Retired), Devanahalli Taluk, Bangalore Rural District, of the charges leveled against him.

6. Action taken in the matter shall be intimated to this Authority.

Connected records are enclosed herewith.

Sd/- 2/2/22

**(JUSTICE B.S.PATIL)**
Upalokayukta-2,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–97/2020/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 25/02/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ಕೇಶವಮೂರ್ತಿ,** ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನಿವೃತ್ತ) ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಬಿಡಿ/3363/2015/ಸನಿಕಾಸ–2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 03/08/2016.
2. ಸರ್ಕಾರದ
   i. ಆದೇಶ ಸಂಖ್ಯೆ: 95 ಎಡಿಇ 2016, ಬೆಂಗಳೂರು, ದಿನಾಂಕ: 16/01/2020.
   ii. ತಿದ್ದುಪಡಿ ಆದೇಶ ಸಂಖ್ಯೆ: ಕಂಇ 95 ಎಡಿಇ 2016, ಬೆಂಗಳೂರು, ದಿನಾಂಕ: 13/02/2020.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/97/2020, ಬೆಂಗಳೂರು ದಿನಾಂಕ: 21/05/2020.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಕೆ. ಮುನಿಕೃಷ್ಣ** ಬಿನ್ ಪಿ. ಕೃಷ್ಣಪ್ಪ, 1ನೇ ಮುಖ್ಯ ರಸ್ತೆ, ಪ್ಯಾಲೆಸ್ ಗುಟ್ಟಹಳ್ಳಿ, ಜಾಮಿಯಾ ಮಸೀದಿ ಕಾಂಪ್ಲೆಕ್ಸ್, ಬೆಂಗಳೂರು ರವರು ಆಪಾದಿತ ಸರ್ಕಾರಿ ನೌಕರ ಶ್ರೀ. **ಕೇಶವಮೂರ್ತಿ,** ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನಿವೃತ್ತ) ಇವರ ವಿರುದ್ಧ ದೂರು ದಾಖಲಾಗಿದ್ದು, ತಮ್ಮ ದೂರಿನಲ್ಲಿ

ದೇವನಹಳ್ಳಿ ತಾಲ್ಲೂಕು ಬೀರಸಂದ್ರ ಗ್ರಾಮದ ಸ.ನಂ.13 ಒಟ್ಟು ಕ್ಷೇತ್ರ 155 ಎಕರೆ, ಇದ್ದು ಇದರಲ್ಲಿ 1961 ರಿಂದ ಈವರೆಗೆ ಸರ್ಕಾರದಿಂದ ಜನರಿಗೆ ಜಮೀನು ಮಂಜೂರಿಯಾಗಿದ್ದು, ಇನ್ನೂ 19 ಎಕರೆ, ಗೋಮಾಳ ಸರ್ಕಾರದ ಹೆಸರಿನಲ್ಲಿದೆ. ಇದರಲ್ಲಿ 4 ಎಕರೆ, ಜಾಗವನ್ನು ಅಶ್ವತಪ್ಪ ಮತ್ತು ಅಂಜನಪ್ಪ ಎನ್ನುವವರು ಕಬಳಿಸಿದ್ದು ಇರುತ್ತದೆ. 1961ರಲ್ಲಿ 4 ಎಕರೆ, ಜಮೀನನ್ನು ಪಿಳಮ್ಮ ಗಂಡ ತಮ್ಮಣ್ಣ ಇವರಿಗೆ 1 ವರ್ಷದ ಕಾಲ ಗುತ್ತಿಗೆಗೆ ಸರ್ಕಾರ ನೀಡಿದ್ದು, ಅವರಿಗೆ ಅವರ ಹೆಸರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ. ಒಂದು ವರ್ಷ ಗುತ್ತಿಗೆ ಕಾಲ ಮುಗಿದ ನಂತರ ಈ ಜಮೀನನ್ನು ಪಿಳಮ್ಮನವರಿಗೆ ಖಾಯಂ ಮಂಜೂರಿ ಮಾಡಿರುವುದಿಲ್ಲ. ಪಿಳಮ್ಮ ತೀರಿಕೊಂಡನಂತರ ಅವರ ಮಕ್ಕಳಾದ ಅಶ್ವಥಪ್ಪ ಮತ್ತು ಅಂಜನಪ್ಪ ಈ ಜಮೀನಿನ ಸ್ವಾಧೀನತೆಯನ್ನು ಕಳೆದುಕೊಂಡಿರುತ್ತಾರೆ. ಈ ಬಗ್ಗೆ ಉಪವಿಭಾಗಾಧಿಕಾರಿಗಳಲ್ಲಿ ಪ್ರಕರಣ ನಡೆದು ಇವರು ಕಾಯಂ ಮಂಜೂರಾತಿಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದ ಕಾರಣ ಇವರಿಗೆ ಜಮೀನು ಮಂಜೂರಿಯಾಗಿರುವುದಿಲ್ಲ. ಅಂಜನಪ್ಪ ಮತ್ತು ಅಶ್ವಥಪ್ಪ ಇವರು ಆ.ಸ.ನೌರವರೊಂದಿಗೆ ಶಾಮೀಲಾಗಿ ಸಾಗುವಳಿ ಚೀಟಿ ಹಾಗೂ ಸ್ಕೆಚ್ ಮತ್ತು ಇತರೆ ದಾಖಲಾತಿಗಳನ್ನು ಸೃಷ್ಟಿಸಿರುತ್ತಾರೆ. ಆದ್ದರಿಂದ ಇವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲು ಕೇಳಿಕೊಂಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 16/01/2020 ಮತ್ತು ತಿದ್ದುಪಡಿ ಆದೇಶ ದಿನಾಂಕ: 13/02/2020ರ ಆದೇಶದಂತೆ ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 21/05/2020 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀ. ಕೇಶವಮೂರ್ತಿ, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನಿವೃತ್ತ) ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು, ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 30/07/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

2. ಆ.ಸ.ನೌ. ಶ್ರೀ ಕೇಶವಮೂರ್ತಿ, ತಹಸೀಲ್ದಾರ್ ರವರು ಆದ ನೀವು ತಾಲ್ಲೂಕು ಕಚೇರಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದೇವನಹಳ್ಳಿ ತಾಲ್ಲೂಕು ಬೀರಸಂದ್ರ ಗ್ರಾಮದ ಸ.ನಂ.13 ಒಟ್ಟು ಕ್ಷೇತ್ರ 155 ಎ, ಇದ್ದು ಇದರಲ್ಲಿ 1961 ರಿಂದ ಈವರೆಗೆ ಸರ್ಕಾರದಿಂದ ಜನರಿಗೆ ಜಮೀನು ಮಂಜೂರಿಯಾಗಿದ್ದು, ಇನ್ನೂ 19 ಎ, ಗೋಮಾಳ ಸರ್ಕಾರದ ಹೆಸರಿನಲ್ಲಿದೆ. ಇದರಲ್ಲಿ 4ಎ, ಜಾಗವನ್ನು ಅಶ್ವತಪ್ಪ ಮತ್ತು ಅಂಜನಪ್ಪ ಎನ್ನುವವರು ಕಬಳಿಸಿದ್ದು ಇರುತ್ತದೆ. 1961ರಲ್ಲಿ 4ಎ, ಜಮೀನನ್ನು ಪಿಳಮ್ಮ ಗಂಡ ತಮ್ಮಣ್ಣ ಇವರಿಗೆ 1 ವರ್ಷದ ಕಾಲ ಗುತ್ತಿಗೆಗೆ ಸರ್ಕಾರ ನೀಡಿದ್ದು, ಅವರಿಗೆ ಅವರ ಹೆಸರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ. ಒಂದು ವರ್ಷ ಗುತ್ತಿಗೆ ಕಾಲ ಮುಗಿದ ನಂತರ ಈ ಜಮೀನನ್ನು ಪಿಳಮ್ಮನವರಿಗೆ ಖಾಯಂ ಮಂಜೂರಿ ಮಾಡಿರುವುದಿಲ್ಲ. ಪಿಳಮ್ಮ ತೀರಿಕೊಂಡನಂತರ ಅವರ ಮಕ್ಕಳಾದ ಅಶ್ವಥಪ್ಪ ಮತ್ತು ಅಂಜನಪ್ಪ ಈ ಜಮೀನಿನ ಸ್ವಾಧೀನತೆಯನ್ನು ಕಳೆದುಕೊಂಡಿರುತ್ತಾರೆ. ಈ ಬಗ್ಗೆ

ಉಪವಿಭಾಗಾಧಿಕಾರಿಗಳಲ್ಲಿ ಪ್ರಕರಣ ನಡೆದು ಇವರು ಕಾಯಂ ಮಂಜೂರಾತಿಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದ ಕಾರಣ ಇವರಿಗೆ ಜಮೀನು ಮಂಜೂರಿಯಾಗಿರುವುದಿಲ್ಲ. ಅಂಜನಪ್ಪ ಮತ್ತು ಅಶ್ವಥಪ್ಪ ಇವರು ಎದುರುದಾರರೊಂದಿಗೆ ಶಾಮೀಲಾಗಿ ಸಾಗುವಳಿ ಚೀಟಿ ಹಾಗೂ ಸ್ಕೆಚ್ ಮತ್ತು ಇತರೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸರ್ಕಾರಿ ನೌಕರನಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) (i) ಮತ್ತು (ii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

**3. ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಬೀರಸಂದ್ರ ಗ್ರಾಮದ ಸ.ನಂ.13 ಒಟ್ಟು ಕ್ಷೇತ್ರ 155 ಎ, ಇದ್ದು ಇದರಲ್ಲಿ 1961ರಿಂದ ಇದುವರೆಗೆ ಸರ್ಕಾರದಿಂದ ಜನರಿಗೆ ಜಮೀನು ಮಂಜೂರಿಯಾಗಿದ್ದು ಇನ್ನು 19 ಎ, ಗೋಮಾಳ ಸರ್ಕಾರದ ಹೆಸರಿನಲ್ಲಿದೆ. ಇದರಲ್ಲಿ 4ಎ, ಜಾಗವನ್ನು ಅಶ್ವತಪ್ಪ ಮತ್ತು ಅಂಜನಪ್ಪ ಎನ್ನುವವರು ಕಬಳಿಸಿದ್ದು ಇರುತ್ತದೆ. 1961ರಲ್ಲಿ 4ಎ, ಜಮೀನನ್ನು ಪಿಳಮ್ಮ ಗಂಡ ತಮ್ಮಣ್ಣ ಇವರಿಗೆ 1 ವರ್ಷದ ಕಾಲ

ಗುತ್ತಿಗೆಗೆ ಸರ್ಕಾರ ನೀಡಿದ್ದು, ಅವರಿಗೆ ಅವರ ಹೆಸರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು ನೀಡಿರುತ್ತಾರೆ. ಒಂದು ವರ್ಷ ಗುತ್ತಿಗೆ ಕಾಲ ಮುಗಿದ ನಂತರ ಈ ಜಮೀನನ್ನು ಪಿಳಮ್ಮನವರಿಗೆ ಖಾಯಂ ಮಂಜೂರಿ ಮಾಡಿರುವುದಿಲ್ಲ. ಪಿಳಮ್ಮ ತೀರಿಕೊಂಡನಂತರ ಅವರ ಮಕ್ಕಳಾದ ಅಶ್ವಥಪ್ಪ ಮತ್ತು ಅಂಜನಪ್ಪ ಈ ಜಮೀನಿನ ಸ್ವಾಧೀನತೆಯನ್ನು ಕಳೆದುಕೊಂಡಿರುತ್ತಾರೆ. ಈ ಬಗ್ಗೆ ಉಪವಿಭಾಗಾಧಿಕಾರಿಗಳಲ್ಲಿ ಪ್ರಕರಣ ನಡೆದು ಇವರು ಕಾಯಂ ಮಂಜೂರಾತಿಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದ ಕಾರಣ ಇವರಿಗೆ ಜಮೀನು ಮಂಜೂರಿಯಾಗಿರುವುದಿಲ್ಲ. ಅಂಜನಪ್ಪ ಮತ್ತು ಅಶ್ವಥಪ್ಪ ಇವರು ಎದುರುದಾರರೊಂದಿಗೆ ಶಾಮೀಲಾಗಿ ಸಾಗುವಳಿ ಚೀಟಿ ಹಾಗೂ ಸ್ಕೆಚ್ ಮತ್ತು ಇತರೆ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆ.

4. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅಶ್ವಥಪ್ಪ ಮತ್ತು ಅಂಜನಪ್ಪ ಇವರ ಪ್ರಕರಣ ಉಪವಿಭಾಗಾಧಿಕಾರಿಗಳ ಮುಂದೆ ಆರ್.ಎ.119/2008-09 ಅಂತ ಮೇಲ್ಮನವಿ ಸಲ್ಲಿಸಿದ್ದರ ಮೇರೆಗೆ ಅವರು ಎದುರುದಾರರಿಗೆ ಈ ಪ್ರಕರಣದ ವಿಚಾರಣೆ ನಡೆಸುವಂತೆ ಆದೇಶಿಸಿರುತ್ತಾರೆ. ಈ ಜಮೀನಿನ ಸಾಗುವಳಿ ಚೀಟಿ ಹಾಗೂ ಇತರೆ ಮಾಲೀಕತ್ವದ ಬಗ್ಗೆ ದೇವನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.ನಂ.257/2014 ಅಂತ ದಾವೆ ನಡೆದಿದ್ದು ಅದು ವಿಚಾರಣೆ ಹಂತದಲ್ಲಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿ ಎದುರುದಾರರು ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಅಸ್ಪಷ್ಟ ವರದಿಯನ್ನು ನೀಡಿರುತ್ತಾರೆ. ಪಿಳಮ್ಮನ ಮಕ್ಕಳು ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ಮಾನ್ಯ ಜಿಲ್ಲಾಧಿಕಾರಿಗಳು ಉಚ್ಚ ನ್ಯಾಯಾಲಯದ ಡಬ್ಲ್ಯು.ಪಿ.ನಂ.5702/2009 ಮತ್ತು ಸಿ.ಸಿ.ಸಿ.654/2010ರಲ್ಲಿ ನ್ಯಾಯ ನಿಂದನೆ 1/10-11ರ ಉಲ್ಲೇಖವಾಗಿ ಮನಿ

ಆಂಜಿನಪ್ಪನವರಿಗೆ ಪೋಡಿ ಮಾಡಿಕೊಟ್ಟಿರುತ್ತಾರೆ. 1964ರಲ್ಲಿ ಉಪವಿಭಾಗಾಧಿಕಾರಿಗಳು ಮುನಿಆಂಜಿನಪ್ಪನವರಿಗೆ ಮಾಡಿಕೊಟ್ಟಿರುವ ಜಾಗಕ್ಕೆ 1960ರಲ್ಲಿ ಪಿಳಮ್ಮ ನವರಿಗೆ ಓ.ಎಂ. ಆಗಿರುವುದು ಆಶ್ಚರ್ಯವಾಗಿರುತ್ತದೆ. ಆದ್ದರಿಂದ ಎದುರುದಾರರು 4ಎ, ಜಾಗವನ್ನು ಕಬಳಿಸುವ ಸಂಚಿನಲ್ಲಿ ಭಾಗಿಯಾಗಿರುತ್ತಾರೆಂದು ಕಂಡು ಬರುತ್ತದೆ. ಆದ್ದರಿಂದ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

   i. "ಸದರಿ ಜಮೀನು ಈಗ ಮುನಿ ಆಂಜಿನಪ್ಪ ತಂದೆ ಮುನಿ ನಾರಾಯಣಪ್ಪ ಇವರ ಹೆಸರಿನಲ್ಲಿರುವುದು ಕಂಡು ಬರುತ್ತದೆ. ಈ ಜಮೀನನ್ನು 1960ರಲ್ಲಿ ಪಿಳಮ್ಮ ನವರಿಗೆ ತಾತ್ಕಾಲಿಕ ಸಾಗುವಳಿ ಚೀಟಿ ನೀಡಿದ್ದು ಆನಂತರ ಅವರು ಈ ಜಮೀನಿನ ಖಬ್ಜೆಯಲ್ಲಿ ಇರುವುದಿಲ್ಲವೆಂದು ಕಂಡು ಬರುತ್ತದೆ. ಏಕೆಂದರೆ ಆಶ್ವಥಪ್ಪ ಮತ್ತು ಆಂಜಿನಪ್ಪ ಇವರು ಈ ಜಮೀನಿನ ಕಬ್ಜೆಯಲ್ಲಿ ಇದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅಲ್ಲದೆ ಅಶ್ವಥಪ್ಪ ಮತ್ತು ಆಂಜಿನಪ್ಪ ಇದೇ ಜಮೀನಿನ ಬಗ್ಗೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಮುನಿನಂಜಪ್ಪ ಹಾಗೂ ಇತರರ ವಿರುದ್ಧ ದಾವೆ ಮಾಡಿದ್ದು ಅದು ಇನ್ನು ಚಾಲ್ತಿಯಲ್ಲಿರುತ್ತದೆ.

   ii. ಮಾನ್ಯ ಉಪ ವಿಭಾಗಾಧಿಕಾರಿಗಳು ತಮ್ಮ ಮುಂದೆ ದಾಖಲಾಗಿರುವ ಪ್ರಕರಣ ಸಂ:ಆರ್.ಎ.119/2008-09 ರಲ್ಲಿ ಅಂಜನಪ್ಪ ಹಾಗೂ ಅಶ್ವಥಪ್ಪ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ನಿಯಮಾನುಸಾರ ಕ್ರಮ ಕೈಗೊಳ್ಳಲು ಎದುರುದಾರರಿಗೆ ಆದೇಶಿಸಿದ್ದಾರೆ. ಅಲ್ಲದೆ ಪಿಳಮ್ಮನಿಗೆ ಹಂಗಾಮಿ

ಸಾಗುವಳಿ ಚೀಟಿಯನ್ನು ಕಾಯಂ ಮಾಡದಿರುವ ಬಗ್ಗೆ ನಿಯಮಾನುಸಾರ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿರುತ್ತಾರೆ. ಈ ಪ್ರಕರಣ ಭೂ ದಾಖಲೆಗಳ ತಾಂತ್ರಿಕ ಸಹಾಯಕರ ಮುಂದೆ ಬಂದಾಗ ಅವರು ಪೋಡಿ ದುರಸ್ತಿಗೆ ತಡೆಯಾಜ್ಞೆ ನೀಡಿದ್ದಾರೆ.

iii. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಆಂಜಿನಪ್ಪ ಮತ್ತು ಅಶ್ವಥಪ್ಪ ಇವರಿಗೆ ಜಮೀನು ಕಾನೂನು ಬದ್ಧ ಹೊಂದಲು ಯಾವುದೇ ದಾಖಲೆಗಳು ಇಲ್ಲದಾಗ್ಯೂ ಎದುರುದಾರರು ಅವರಿಗೆ ಅಂಜನಪ್ಪ ಹಾಗೂ ಅಶ್ವಥಪ್ಪ ನವರಿಗೆ ಹಂಗಾಮಿ ಸಾಗುವಳಿ ಚೀಟಿಯನ್ನು ಕಾಯಂ ಮಾಡುವ ವಿಷಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಇದರಿಂದ ಕಂಡು ಬರುವುದೇನೆಂದರೆ ಎದುರುದಾರರು ಆಂಜಿನಪ್ಪ ಹಾಗೂ ಅಶ್ವಥಪ್ಪ ಇವರಿಗೆ ಸಹಾಯ ಮಾಡಲು ಅದಕ್ಕೆ ಪೂರಕವಾಗಿ ವರ್ತಿಸುತ್ತಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಎದುರುದಾರರು ಈ ಪ್ರಕರಣದಲ್ಲಿ ಶಾಮೀಲಾಗಿ ಕರ್ತವ್ಯಲೋಪವೆಸಗಿದ್ದಾರೆಂದು ಅಭಿಪ್ರಾಯಕ್ಕೆ ಬರಲಾಗಿದೆ."

6. ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯಲೋಪವೆಸಗಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ

ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು, ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 03/02/2021 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್(ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ತಾನು ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದು ದಿನಾಂಕ: 06/03/2014 ರಿಂದ 04/07/2016 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ದೂರಿನಲ್ಲಿರುವ ವಿಷಯದ ಬಗ್ಗೆ ದೇವನಹಳ್ಳಿಯ ಸಿವಿಲ್ ನ್ಯಾಯಾಲಯ (ಜೂನಿಯರ್ ಡಿವಿಷನ್)ರಲ್ಲಿ ಅಸಲು ದಾವಾ ನಂ.257/2014 ದಾಖಲಾಗಿರುತ್ತದೆ. ಆದ್ದರಿಂದ

ತನಗೆ ಇತ್ಯರ್ಥ ಕೊಡಿಸಲು ಅವಕಾಶ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯನ್ನು ಅಂದಿನ ತಹಶೀಲ್ದಾರ್‌ರಾದ ಶ್ರೀ. ನಾರಾಯಣಸ್ವಾಮಿ ರವರಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿದ್ದು, ಶ್ರೀ. ನಾರಾಯಣಸ್ವಾಮಿ ರವರು ತಮ್ಮ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/563/2013-14 ದಿನಾಂಕ: 13/02/2017ರಲ್ಲಿ ವರದಿಯನ್ನು ದಾಖಲಾತಿಗಳೊಂದಿಗೆ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ರವರಿಗೆ ಸಲ್ಲಿಸಿದ್ದು, ಸದರಿ ವರದಿಯಲ್ಲಿ ದಾಖಲೆಗಳನ್ನು ಮತ್ತು ವಾಸ್ತವಾಷಗಳನ್ನು ಪರಿಶೀಲಿಸಿ, ದೂರುದಾರರು ಸಲ್ಲಿಸಿದ ದೂರಿನಲ್ಲಿ ನೀಡಿರುವ ಅಂಶಗಳು ಪರಿಗಣಿತವಾಗಿರುವುದು ಕಂಡುಬಂದಿರುವುದು ದೃಢಪಟ್ಟಿಲ್ಲ ಎಂದು ವರದಿಯನ್ನು ಸಲ್ಲಿಸಿರುತ್ತಾರೆ. ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಇವರ ಆದೇಶ ಸಂಖ್ಯೆ: ಎಲ್‌ಎನ್‌ಡಿ/ಎಸ್‌ಆರ್/81-150/1960-61 ದಿನಾಂಕ: 07/03/1962ರಲ್ಲಿ ಶ್ರೀಮತಿ. ಪಿಳ್ಳಮ್ಮ ಕೋಂ ತಮ್ಮಣ್ಣ ಇವರಿಗೆ ಬೀರಸಂದ್ರ ಗ್ರಾಮದ ಸರ್ವೆ ನಂ.13ರಲ್ಲಿ 4 ಎಕರೆ ಭೂಮಿಯನ್ನು ಖಾಯಂ ಆಗಿ ಸ್ಥಿರೀಕರಿಸಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ನ್ಯಾಯಾಲಯದಲ್ಲಿ ರಿವಿಷನ್ ಪಿಟಿಷನ್ ನಂ.55/2013-14ರಲ್ಲಿ ದಿನಾಂಕ: 25/01/2016 ರ ಆದೇಶದ ಪ್ರತಿಯನ್ನು ಹಾಗೂ ಅದೇ ಸಂಖ್ಯೆಯುಳ್ಳ ದಿನಾಂಕ: 08/02/2016ರ ತಿದ್ದೋಲೆಯ ಆದೇಶದ ಪ್ರಕಾರ ಮೇಲೆ ಹೇಳಿದ ಜಮೀನು ಶ್ರೀಮತಿ. ಪಿಳ್ಳಮ್ಮ ಇವರ ಹೆಸರಿಗೆ ಆಗಿದ್ದು, ಅವರು ಮೃತಪಟ್ಟ ನಂತರ ಎಂ.ಆರ್ ಸಂಖ್ಯೆ: ಹೆಚ್-18/2013-14 ದಿನಾಂಕ: 10/01/2014ರಲ್ಲಿ ಅವುಗಳ ವಾರಸುದಾರರಾದ ಶ್ರೀ. ಅಶ್ವತ್ಥ ಮತ್ತು ಶ್ರೀ. ಅಂಜನಪ್ಪ ಇವರ ಹೆಸರಿಗೆ ಆರ್‌ಟಿಸಿಯಲ್ಲಿ ದಾಖಲಾಗಿರುವುದನ್ನು ಸ್ಥಿರೀಕರಿಸಲಾಗಿದೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 9 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

8

ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ 5 ರವರೆಗಿನ ದಾಖಲಾತಿಗಳನ್ನು ಪಿ.ಡಬ್ಲ್ಯೂ.1 ಇವರ ಪಾಟಿ ಸವಾಲಿನಲ್ಲಿ ಗುರುತಿಸಲಾಗಿದ್ದು, ನಿ.ಡಿ.6 ರಿಂದ 8 ರವರೆಗಿನ ದಾಖಲಾತಿಗಳನ್ನು ಆ.ಸ.ನೌ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಗುರುತುಪಡಿಸಿಕೊಂಡಿರುತ್ತಾರೆ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ಈ ಪ್ರಕರಣದಲ್ಲಿ ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ. ಕೆ. ಮುನಿಕೃಷ್ಣ** ಬಿನ್ ಪಿ. ಕೃಷ್ಣಪ್ಪ, 1ನೇ ಮುಖ್ಯ ರಸ್ತೆ, ಪ್ಯಾಲೆಸ್ ಗುಟ್ಟಹಳ್ಳಿ, ಜಾಮಿಯಾ

ಮಸೀದಿ ಕಾಂಪ್ಲೆಕ್ಸ್, ಬೆಂಗಳೂರು ರವರ ಸಾಕ್ಷ್ಯ ಮಾಡಿಸಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಬೀರಸಂದ್ರ ಗ್ರಾಮಕ್ಕೆ ಸೇರಿದ ಸರ್ವೆ ನಂ.13 ಇದರ ಒಟ್ಟು ವಿಸ್ತೀರ್ಣ 153 ಎಕರೆ ಇದ್ದು, ಅದು ಗೋಮಾಳ ಜಮೀನು ಇರುತ್ತದೆ, ಸದರಿ ಜಮೀನಿನಲ್ಲಿ 19 ಎಕರೆ ಹೊರತುಪಡಿಸಿ ಉಳಿದ ಜಮೀನನ್ನು ಬೇರೆ ಬೇರೆಯವರಿಗೆ ಗ್ರಾಂಟ್ ಆಗಿರುತ್ತದೆ ಅಂತಾ ನುಡಿದಿರುತ್ತಾರೆ. 1961ನೇ ಸಾಲಿನಲ್ಲಿ 19 ಎಕರೆಯಲ್ಲಿ 4 ಎಕರೆ ಜಮೀನನ್ನು ಒಬ್ಬ ಶ್ರೀಮತಿ. ಪಿಳ್ಳಮ್ಮ ಎಂಬುವವರಿಗೆ ಗ್ರೋಮರ್ ಫುಡ್ ಯೋಜನೆಯಲ್ಲಿ 1 ವರ್ಷದವರೆಗೆ ಗುತ್ತಿಗೆ ನೀಡಲಾಗಿತ್ತು ಹಾಗೂ 1 ವರ್ಷದವರೆಗೆ ಸಾಗುವಳಿ ಚೀಟಿಯನ್ನು ನೀಡಲಾಗಿತ್ತು. 1 ವರ್ಷದ ನಂತರ ಪಿಳ್ಳಮ್ಮ ರವರಿಗೆ ಜಮೀನು ಖಾಯಂ ಮಂಜೂರಾತಿ ಆಗಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು, ಪಿಳ್ಳಮ್ಮನ ಮಕ್ಕಳು ಹಾಗೂ ಆ.ಸ.ನೌ ರವರು ಸೇರಿಕೊಂಡು ಜಮೀನನ್ನು ಕಬಳಿಸುವ ಸಂಬಂಧ 2014ರಲ್ಲಿ ಗ್ರಾಂಟ್ ಪ್ರಮಾಣ ಪತ್ರ, ಓ.ಎಂ ಕಾಪಿ, ಪೋಡಿ, ಆರ್.ಟಿ.ಸಿ ಖಾತಾ ಹಾಗೂ ಮ್ಯುಟೇಷನ್ ಅನ್ನು ಮಾಡಿಕೊಂಡಿರುತ್ತಾರೆ. 2014ಕ್ಕಿಂತ ಮೊದಲು ಸದರಿ 4 ಎಕರೆ ಜಮೀನು ಒಬ್ಬ ಶ್ರೀ. ಶಂಕರ್ ರಾವ್, ಮಾಜಿ ಸೈನಿಕ ಇವರ ಹೆಸರಿನಲ್ಲಿದ್ದು, ಉಪವಿಭಾಗಾಧಿಕಾರಿಗಳು ಆತನಿಗೆ ಗ್ರಾಂಟ್ ಮಾಡಿದ್ದರು. ನಂತರ ಶಂಕರ್ ರಾವ್ ರವರು 1972ನೇ ಸಾಲಿನಲ್ಲಿ ಶ್ರೀ. ಮುನಿಆಂಜಿನಪ್ಪ ರವರಿಗೆ ಪೂರ್ತಿ 4 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಈ ಬಗ್ಗೆ ನಿ.ಪಿ.1 ರಿಂದ 9 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು, ನಿ.ಪಿ.1 ಮತ್ತು ನಿ.ಪಿ.2 ಫಾರಂ ನಂ.1 ಮತ್ತು 2; ನಿ.ಪಿ.3 ದೂರು; ನಿ.ಪಿ.4 ಗ್ರಾಂಟ್ ಆದೇಶದ ದೃಢೀಕೃತ ನಕಲು; ನಿ.ಪಿ.5 ಮ್ಯುಟೇಷನ್ ನಂ.ಎಲ್ಎನ್‌ಡಿ/ಎಸ್‌ಆರ್/129/1959-60 & ಜಿಆರ್‌ಒ/258 ದಿನಾಂಕ: 13/09/1968; ನಿ.ಪಿ.6 ನಕ್ಷೆ; ನಿ.ಪಿ.7 ತಹಶೀಲ್ದಾರ್ ರವರು ನೀಡಿದ ಹಿಂಬರಹ; ನಿ.ಪಿ.8 ಅಧೀಕೃತ ಜ್ಞಾಪನ ಮತ್ತು ನಿ.ಪಿ.9 ಗುತ್ತಿಗೆಯ ಸಾಗುವಳಿ ಚೀಟಿಯನ್ನು ಗುರುತಿಸಿಕೊಂಡಿರುತ್ತಾರೆ.

13. ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಇವರು ಸಾಕ್ಷಿ ರೂಪದಲ್ಲಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.8 ರವರೆಗಿನ ದಾಖಲಾತಿಗಳನ್ನು

ಗುರುತಿಸಿಕೊಂಡಿರುತ್ತಾರೆ. ನಿ.ಡಿ.1 ದೇವನಹಳ್ಳಿ ತಾಲ್ಲೂಕು ತಹಶೀಲ್ದಾರ್ ರವರ ನ್ಯಾಯಾಲಯದ ಆದೇಶದ ಪ್ರತಿ; ನಿ.ಡಿ.2 ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ರವರ ಆದೇಶದ ಪ್ರತಿ ದಿನಾಂಕ: 05/11/2013; ನಿ.ಡಿ.3 ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ರವರ ಆದೇಶದ ಪ್ರತಿ ದಿನಾಂಕ: 10/04/2007; ನಿ.ಡಿ.4 ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ರಿವಿಷನ್ ಪಿಟಿಷನ್‌ರಲ್ಲಿ ಮಾಡಿದ ಆದೇಶ; ನಿ.ಡಿ.5 ಸದರಿ ರಿವಿಷನ್ ಪಿಟಿಷನ್‌ರಲ್ಲಿ ತಿದ್ದುಪಡಿಗೆ ಮಾಡಿದ ಆದೇಶ; ನಿ.ಡಿ.6 ಗ್ರಾಂಟ್ ಪ್ರಮಾಣಾ ಪತ್ರ; ನಿ.ಡಿ.7 ಅಧೀಕೃತ ಜ್ಞಾಪನ ದಿನಾಂಕ: 07/03/1962 ಮತ್ತು ನಿ.ಡಿ.8 ಆ.ಸ.ನೌ ರವರ ಸಿ.ಟಿ.ಸಿ ಪ್ರತಿಯನ್ನು ಗುರುತಿಸಿಕೊಂಡಿರುತ್ತಾರೆ.

14. ಪಿ.ಡಬ್ಲ್ಯೂ.1 ರವರ ಪ್ರಕಾರ 1962ನೇ ಸಾಲಿನಲ್ಲಿ ಪಿಳ್ಳಮ್ಮ ಇವರಿಗೆ ಬೀರಸಂದ್ರ ಗ್ರಾಮಕ್ಕೆ ಸೇರಿದ ಸರ್ವೆ ನಂ.13ರಲ್ಲಿ ಕೇವಲ 4 ಎಕರೆ ಜಮೀನನ್ನು 1 ವರ್ಷದವರೆಗೆ ಗುತ್ತಿಗೆ ನೀಡಲಾಗಿದ್ದು, ಅದೇ ರೀತಿ ಸಾಗುವಳಿ ಚೀಟಿಯನ್ನು ಸಹ 1 ವರ್ಷದವರೆಗೆ ನೀಡಲಾಗಿದ್ದು, ನಂತರ ಖಾಯಂ ಆಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆ.ಸ.ನೌ ರವರ ಪ್ರಕಾರ ಸದರಿ ಜಮೀನು 1962ನೇ ಸಾಲಿನಲ್ಲಿಯೇ ಪಿಳ್ಳಮ್ಮ ಇವರಿಗೆ ಖಾಯಂ ಆಗಿ ಮಂಜೂರಾಗಿರುತ್ತದೆ ಅಂತಾ ಹೇಳಿರುತ್ತಾರೆ. ನಿ.ಪಿ.9ರ ಪ್ರಕಾರ ಪಿಳ್ಳಮ್ಮ ಇವರಿಗೆ ಸದರಿ ಜಮೀನನ್ನು ಗುತ್ತಿಗೆ ಸಾಗುವಳಿ ಚೀಟಿ ನೀಡಿದ್ದು ಕಂಡುಬರುತ್ತದೆ. ನಿ.ಪಿ.8 ಇದು ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಇವರು ದಿನಾಂಕ: 07/03/1962ರಲ್ಲಿ ಆದೇಶ ಮಾಡಿದ್ದು, ಸದರಿ ಆದೇಶದಲ್ಲಿ (official memorandum) the excess extent as noted in the margin detected at the time of pakka podi of land granted out of Sy.No.13 of Beerasandra Village, Devanahalli Taluk is confirmed at an upset price of Rs.50/- per acre subject to recovery of becasessament and reservation of cart tract. The upset price live is waived as the grantees are depressed class person sanction is accorded. Wherein the name of 4 persons mentioned as below:

1. Sri. Patel Pareyappanagowda S/o Muniyappa – 4 acres

2. Sri. Munishamaiah S/o Beerappa – 4 acres
3. Sri. Muniswamy S/o Hanumanthaiah – 4 acres
4. Sri. Pillamma W/o Tammanna – acres

15. ನಿ.ಪಿ.4ರ ಪ್ರಕಾರ (ನಿ.ಡಿ.6) ಎರಡು ದಾಖಲಾತಿಗಳು ಒಂದೇ ಇದ್ದು, ಈ ದಾಖಲಾತಿ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪ–ವಿಭಾಗ, ಬೆಂಗಳೂರು ಫಾರಂ.1 ಎಲ್‌ಎನ್‌ಡಿ/ಎಸ್‌ಆರ್/150/1960–61 ದಿನಾಂಕ: 07/03/1962, ದೇವನಹಳ್ಳಿ ತಾಲ್ಲೂಕ್ ತಹಶೀಲ್ದಾರ್ ನಂ.ಎಲ್‌ಎನ್‌ಡಿ/ಎಸ್‌ಆರ್/129/1959–60 ದಿನಾಂಕ: 27/06/1992 ಅಂತಾ ನಮೂದು ಇದ್ದು, ಅದು ಗ್ರಾಂಟ್ ಪ್ರಮಾಣ ಪತ್ರ ಇದ್ದು, ಅದರಲ್ಲಿ "ಹಿಡವಳಿಯಲ್ಲಿಲದ ಸರ್ಕಾರದ ಜಮೀನನ್ನು ಸಾಗುವಳಿ ವಿಲೇವಾರಿ ಮಾಡಿ ಹಿಡವಳಿ ಹಕ್ಕನ್ನು ಕೊಡುವುದಕ್ಕೆ ಏರ್ಪಟ್ಟ ನಿಬಂಧನೆಗಳ ಮೇರೆಗೆ ಈ ಕೆಳಗೆ ಬರೆಯಲ್ಪಟ್ಟಿರುವ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟಿರುವ ಜಮೀನು ವಿಕ್ರಯಿಸಲ್ಪಟ್ಟು ಪಿಳ್ಳಮ್ಮ ಕೋಂ ತಮ್ಮಣ್ಣ ಎಂಬುವವರು ಬಹಿರಂಗವಾದ ಹರಾಜಿನಲ್ಲಿ ಅಥವಾ ನಿಯಮಿತವಾದ ಸರ್ಕಾರಿ ಕಿಮ್ಮತ್ತಿಗೆ ಕೊಂಡುಕೊಂಡಿರುವದರಿಂದಲೂ ಮತ್ತು ಸದರಿ ಹರಾಜು ಕ್ರಮವಾಗಿ ಮಂಜೂರು ಮಾಡಲ್ಪಟ್ಟಿರುವುದಲ್ಲದೇ ಮೇಲ್ಕಂಡವರು ಸದರಿ ಜಮೀನಿನ ಕ್ರಯಾದಾರರೆಂದು ಕ್ರಮವಾಗಿ ಪ್ರಕಟಿಸ್ಪಟ್ಟಿರುವುದರಿಂದಲೂ ಮೇಲ್ಕಂಡವರು ಎಕರೆಗೆ ರೂ.50/–ಗಳ ಕ್ರಯದ ಮೊಬಗಲಿನ ಪೂರ್ತಿ ಹಣವನ್ನು ಸರ್ಕಾರಿ ಖಜಾನೆಗೆ ಪಾವತಿ ಮಾಡುವುದರಿಂದಲೂ ಮೇಲ್ಕಂಡವರು ಸದರಿ ಜಮೀನಿನ ಹಿಡುವಳಿಯನ್ನು ಹೊಂದಲು ಈ ಮೂಲಕ ಅಪ್ಪಣೆಯನ್ನು ಕೊಟ್ಟಿದ್ದು ಇರುತ್ತದೆ. ಅಲ್ಲದೇ, ಈ ಜಮೀನನ್ನು ಪಿಳ್ಳಮ್ಮ ಮತ್ತು ಅವರ ವಾರಸುದಾರರಿಗೂ ಅವರ ಪ್ರತಿನಿಧಿಗಳು ಮತ್ತು ಹವಾಲ್ತೆದಾರರಿಗೂ ಸರ್ವೆ ಖಾತರಿ ನಿಬಂಧನೆಯ ಷರತ್ತುಗಳ ಮೇರೆಗೆ ಈ ಮೂಲಕ ಕೊಟ್ಟು ಖಾಯಂ ಮಾಡಿರುತ್ತಾರೆ ಅಂತಾ ಆದೇಶಿಸಿದ್ದು ಇರುತ್ತದೆ". ದೂರುದಾರರ ಪ್ರಕಾರ ಈ ಜಮೀನು ಪಿಳ್ಳಮ್ಮ ಇವರಿಗೆ ಖಾಯಂ ಆಗಿ ನೀಡಿರುವುದಿಲ್ಲ ಅಂತಾ ಹೇಳಿದ್ದು, ಆದರೆ ನಿ.ಪಿ.1ನ್ನು ಪರಿಶೀಲಿಸಿದಾಗ ಸದರಿ ಜಮೀನನ್ನು ಖಾಯಂ ಆಗಿ ಕೊಟ್ಟಿರುತ್ತಾರೆ ಅಂತಾ ಕಂಡುಬರುತ್ತದೆ. ನಿ.ಪಿ.5 ಇದು mutation extract ಇದ್ದು, ನಿ.ಪಿ.8ರ ದಾಖಲಾತಿಯ ಮೇಲೆ ಪಿಳ್ಳಮ್ಮ ರವರ ಹೆಸರು ದಾಖಲಾಗಿದ್ದು

ಕಂಡುಬರುತ್ತದೆ. ನಿ.ಪಿ.6 ಇದು ಸದರಿ ಜಮೀನಿನ ನಕ್ಷೆ ಇದ್ದು, ಅದರು ಸರ್ವೆ ನಂ.13ಕ್ಕೆ ಸಂಬಂಧಪಟ್ಟಿದ್ದು ಇರುತ್ತದೆ. ಅದರಲ್ಲಿ ಪಿಳ್ಳಮ್ಮನಿಗೆ ಮತ್ತು ಇತರರಿಗೆ ಯಾವ ಜಮೀನುಗಳು ಬಂದಿರುತ್ತದೆ ಅಂತಾ ನಮೂದಿಸಿದ್ದು ಇರುತ್ತದೆ. ದೂರುದಾರರು ತಮ್ಮ ಪಾಟಿಸವಾಲಿನಲ್ಲಿ ನಿ.ಪಿ.1 ದಾಖಲಾತಿಯ ಪ್ರಕಾರ ಪಿಳ್ಳಮ್ಮ ಇವರಿಗೆ ಖಾಯಂ ಆಗಿ ಜಮೀನನ್ನು ಕೊಟ್ಟಿರುತ್ತಾರೆ ಅಂತಾ ಮಾಡಿದ ಸಲಹೆಗೆ ಸಾಕ್ಷಿಯು ಸದರಿ ದಾಖಲಾತಿಯು ಸುಳ್ಳು ಇರುತ್ತದೆ ಅಂತಾ ನುಡಿದಿರುತ್ತಾರೆ. 1962ರಲ್ಲಿ ಆದ ದಾಖಲಾತಿಯು ಸುಳ್ಳು ಇರುತ್ತದೆ ಅಂತಾ ಯಾವುದೇ ದಾಖಲಾತಿಗಳನ್ನು ದೂರುದಾರರು ಸಲ್ಲಿಸಿರುವುದಿಲ್ಲ ಮತ್ತು ರುಜುವಾತುಪಡಿಸಿರುವುದಿಲ್ಲ.

16. ಆ.ಸ.ನೌ ರವರು ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ ಉಪವಿಭಾಗ, ಇವರ ಪ್ರಕರಣ ಸಂಖ್ಯೆ: ಆರ್‌ಎ(ದೇ)199/2008-09ರಲ್ಲಿ ಆದ ಆದೇಶ ದಿನಾಂಕ: 05/11/2013 ಹಾಜರುಪಡಿಸಿದ್ದು, ಅದನ್ನು ನಿ.ಡಿ.2 ಎಂದು ಗುರುತಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಆಂಜಿನಪ್ಪ ಈತನು ಒಂದು ಮೇಲ್ಮನವಿಯನ್ನು ಪ್ರತಿವಾದಿಗಳಾದ ತಹಶೀಲ್ದಾರ್ ಮತ್ತು ಅಶ್ವತ್ಥಪ್ಪ ಇವರ ವಿರುದ್ಧ ಸಲ್ಲಿಸಿದ್ದು, ಮೇಲ್ಮನವಿಯಲ್ಲಿ ಮೇಲೆ ಹೇಳಿದ ಜಮೀನಿಗೆ ಸಂಬಂಧಪಟ್ಟಂತೆ ಮೇಲ್ಮನವಿದಾರರ ತಾಯಿಯ ಹೆಸರು ಪಹಣಿಯಲ್ಲಿ 1983ನೇ ಸಾಲಿಗೆ ಮುಂದುವರೆಸಲಾಗಿದ್ದು, ಇವರ ತಾಯಿಯವರು ದಿನಾಂಕ: 24/01/2008ರಲ್ಲಿ ಮೃತಪಟ್ಟಿರುತ್ತಾರೆ. ನಂತರ ಮೇಲ್ಮನವಿದಾರರು ಹಾಗೂ 2ನೇ ಪ್ರತಿವಾದಿ ಪ್ರಸ್ತಾಪಿತ ಜಮೀನಿನ ಉತ್ತರಾಧಿಕಾರಿಗಳಾಗಿರುತ್ತಾರೆ. ಅವರಿಬ್ಬರೂ ಸದರಿ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದು, ಅದರಂತೆ ಪ್ರಶ್ನಿತ ಜಮೀನು ಮೇಲ್ಮನವಿದಾರರ ಪಾಲಿಗೆ ಬಂದಿದ್ದು ಪಹಣಿ ಪತ್ರಿಕೆಯಲ್ಲಿ ಇವರ ತಾಯಿಯ ಹೆಸರು ಪಿಳ್ಳಮ್ಮ ಬದಲಾಗಿ ಪಿಳ್ಳಪ್ಪ ಅಂತಾ ನಮೂದಾಗಿದ್ದು, ಅದೇ ರೀತಿ ಗಣಕಯಂತ್ರ ಪಹಣಿಯಲ್ಲಿ ಪಿಳ್ಳಪ್ಪ ಬಿನ್ ಲಪ್ಪಣ್ಣ ಎಂದು ತಪ್ಪಾಗಿ ನಮೂದು ಆಗಿರುತ್ತದೆ. ಇದನ್ನು ಸರಿಪಡಿಸಲು 1ನೇ ಪ್ರತಿವಾದಿಯಾದ ತಹಶೀಲ್ದಾರ್ ಇವರಿಗೆ ಕೇಳಿಕೊಂಡಿದ್ದು, ಅದಕ್ಕೆ ಅವರು ತಿರಸ್ಕರಿಸಿರುತ್ತಾರೆ. ಅದರ ವಿರುದ್ಧ ಈ ಮೇಲ್ಮನವಿಯನ್ನು ಸಲ್ಲಿಸಿದ್ದು ಇರುತ್ತದೆ. ಉಪವಿಭಾಗಾಧಿಕಾರಿಗಳು ತಮ್ಮ ಆದೇಶದಲ್ಲಿ "ಮೇಲ್ಮನವಿದಾರರು ಸಲ್ಲಿಸಿರುವ ಮರಣ ಪ್ರಮಾಣ ಪತ್ರದಲ್ಲಿ ಕೋಟೆ ಪಿಳ್ಳಮ್ಮ ಕೋಂ ತಮ್ಮಣ್ಣ ಎಂದು ದಾಖಲಿಸಲಾಗಿದೆ. ವಂಶವೃಕ್ಷದಂತೆ

ಮೇಲ್ಮನವಿದಾರರು ಪಿಳ್ಳಮ್ಮ ಮತ್ತು ತಮ್ಮಣ್ಣನ ಮಗನೆಂದು ಕಂಡುಬರುತ್ತದೆ. ಮೇಲ್ಮನವಿದಾರರ ಪ್ರಸ್ತಾಪಿತ ಜಮೀನು ಅವರ ಭಾಗಕ್ಕೆ ಬಂದಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲವಾದ್ದರಿಂದ, ಪ್ರಕರಣವನ್ನು ತಹಶೀಲ್ದಾರ್ ರವರಿಗೆ ಹಿಂದುರುಗಿಸಿ, ಮೇಲ್ಮನವಿದಾರರಿಂದ ವಿಭಾಗ ಪತ್ರ, ಇ.ಸಿ ಯನ್ನು ಪಡೆದು ಪರಿಶೀಲಿಸಿ, ಪಿಳ್ಳಮ್ಮ ಮತ್ತು ಅವರ ಎಲ್ಲಾ ವಾರಸುದಾರರಿಗೆ ನೋಟಿಸ್ ನೀಡಿ, ವಿಚಾರಣೆ ಮಾಡಿ ಸ್ಥಳ ಹಾಗೂ ಸ್ವಾಧೀನವನ್ನು ಪರಿಶೀಲಿಸಿ, ನಿಯಮಾನುಸಾರ ಮುಂದಿನ ಸೂಕ್ತ ಕ್ರಮಕ್ಕೆ ತಹಶೀಲ್ದಾರ್ ರವರಿಗೆ ಆದೇಶಿಸಿದೆ" ಎಂದು ಆದೇಶವನ್ನು ಮಾಡಿರುತ್ತಾರೆ.

17. ಉಪವಿಭಾಗಾಧಿಕಾರಿಗಳು ಮಾಡಿದ ಆದೇಶದಂತೆ ತಹಶೀಲ್ದಾರ್, ದೇವನಹಳ್ಳಿ ಇವರು ತಮ್ಮ ಪ್ರಕರಣ ಸಂಖ್ಯೆ: ಆರ್‌ಆರ್‌ಟಿ(ಡಿಸ)67/2013–14 ದಿನಾಂಕ: 06/01/2014 ರಂದು ಮರುವಿಚಾರಣೆಯನ್ನು ಮಾಡಲು ತೆಗೆದುಕೊಂಡಿದ್ದು ಇರುತ್ತದೆ. ಆ.ಸ.ನೌ ರವರು ದೇವನಹಳ್ಳಿ ತಾಲ್ಲೂಕು ತಹಶೀಲ್ದಾರ್ ಇವರು ದಿನಾಂಕ: 06/01/2014 ರಂದು ಮಾಡಿದ ಆದೇಶದ ಪ್ರತಿಯನ್ನು ಸಲ್ಲಿಸಿದ್ದು ಅದನ್ನು ನಿ.ಡಿ.1 ಎಂದು ಗುರುತಿಸಲಾಗಿದ್ದು, ಸದರಿ ಆದೇಶದಲ್ಲಿ "ಮೇಲ್ಕಂಡ ಕಾರಣಗಳಿಂದಾಗಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಬೀರಸಂದ್ರ ಗ್ರಾಮದ ಸ.ನಂ.13/ಪಿ4 ರಲ್ಲಿ 4–00 ಎ:ಗು ಜಮೀನಿನ ಪಹಣಿ ಕಾಲಂ (9)ರಲ್ಲಿ ಪಿಳ್ಳಮ್ಮ ಕೋಂ ತಮ್ಮಣ್ಣ ಎಂದು ಸರಿಪಡಿಸಲು ಮತ್ತು ಪಿಳ್ಳಮ್ಮನವರು ಫವತಿ ಆಗಿರುವ ಕಾರಣ ಇವರ ಮಕ್ಕಳಾದ ಅಶ್ವತ್ಥಪ್ಪ ಮತ್ತು ಆಂಜಿನಪ್ಪ ರವರ ಹೆಸರಿಗೆ ಜಂಟಿ ಖಾತೆ ಮಾಡಲು ಆದೇಶಿಸಿದೆ ಹಾಗೂ ಹಂಗಾಮಿ ಸಾಗುವಳಿ ಚೀಟಿಯನ್ನು ಖಾಯಂ ಮಾಡದಿರುವ ವಿಚಾರದಲ್ಲಿ ನಿಯಮಾನುಸಾರ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ". ಈ ಆದೇಶದ ಬಗ್ಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ತಮ್ಮ ರಿವಿಷನ್ ಪಿಟಿಷನ್ ನಂ.55/2013–14ರಲ್ಲಿ ಆದೇಶಿಸಿದ್ದು, ಸದರಿ ದಾಖಲಾತಿ ನಿ.ಡಿ.4 ಎಂದು ಗುರುತಿಸಲಾಗಿರುತ್ತದೆ. ಈ ಆದೇಶದಂತೆ ಪಿಳ್ಳಮ್ಮನ ವಾರಸುದಾರರಿಗೆ ನೋಟಿಸ್ ಕೊಟ್ಟಿದ್ದು, ಅವರು ಆ ಪ್ರಕರಣದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳು

ತಮ್ಮ ಆದೇಶದ ದಿನಾಂಕ: 25/01/2016 ರಲ್ಲಿ ಪುಟ 4 ರಲ್ಲಿ ಈ ಕೆಳಗಿನಂತೆ ಆದೇಶ ಮಾಡಿರುತ್ತಾರೆ.

On verification and examination of the above documents, Smt. Pillamma W/o Thammanna was issued with a Provisional/Lease Grant Saguvali Chit in respect of the land in Sy.No.13 measuring 4A.00 situated at Beerasandra Village, Kundana Hobli, Devanahalli Taluk by virtue of the order dated No.LND.SR.1-150/60-61 dated 22/06/1960. Subsequently, the Assistant Commissioner, Doddaballapura Sub-Division, by his Official Memorandum No.B.AS.LND.SR.1-150/60-61 dated 07/03/1962 has confirmed the lease grant of the land in question at an upset price of Rs.50/-per acre. Accordingly, Smt. Pillamma has paid the upset price as per challan No.38/27.6.1962 and the Tahasildar, by his order No.LND.SR.129/59-60 dated 27/06/1962 has issued the Saguvali Chit in favour of Smt. Pillamma W/o Thammanna. In the Darkhast Register also necessary entries have been made in the name of Smt. Pillamma W/o Thammanna in respect of the land in question. Accordingly, in the Pahanis the name of Smt. Pillamma w/o Thammanna was continued, however since 1983-84 in Col. No.9 as it appears by oversight the name of 'Pillamma S/o Thippanna' has been entered however in Col. No.12(2) the name of Smt. Pillamma was continued. But, again since 1988-89 the entries in Col.No.9 and 12(2) the name of 'Pillappa' is reflected and is continued. Thus,

by virtue of wrong entries made by oversight, the land grant made by the competent authorities based on the material available on record, cannot be doubted and by virtue of the certified copies of the records made available it is clear that Smt. Pillamma w/o Thammanna was granted the land in question by the competent authorities after following the required procedures.

However, as at present Smt. Pillamma w/o Thammanna is deceased, the inheritance khata of the said land is already made as per MR.No.H.18/2013-14 dated 10/01/2014 in the joint names of her sons and legal heirs i.e., Sri. Aswathappa S/o Late Thammanna and Sri. Anjinappa S/o Late Thammanna jointly by Tahasildar Devanahalli and necessary entries have also been reflected in the RTCs.

ಮೇಲ್ಕಂಡ ಆದೇಶದಂತೆ ತಹಶೀಲ್ದಾರ್ ರವರು ಮಾಡಿದ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಅಂತಾ ಹೇಳಿರುತ್ತಾರೆ.

ಪಿ.ಡಬ್ಲ್ಯೂ.1 ಇವರು ತಮ್ಮ ಪಾಟಿಸವಾಲಿನಲ್ಲಿ ನಿ.ಡಿ.1, ನಿ.ಡಿ.2 ಮತ್ತು ನಿ.ಡಿ.4ರ ಬಗ್ಗೆ ನಿಮಗೆ ಮಹಿತಿ ಇರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಸದರಿ ದಾಖಲಾತಿಗಳನ್ನು ತಾನು ನೋಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಅದರಂತೆ ನಿ.ಡಿ.1 ಮತ್ತು ನಿ.ಡಿ.2ನ್ನು ಡಿಸೆಂಬರ್ 2013ರಲ್ಲಿ ನೋಡಿರುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾರೆ. ಈ ವಿಷಯದ ಬಗ್ಗೆ ಗೊತ್ತಾದ ನಂತರ ಲೋಕಾಯುಕ್ತ ಸಂಸ್ಥೆಗೆ ದೂರನ್ನು ಸಲ್ಲಿಸಿರುತ್ತೀರಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲತಿ ಪಡೆದುಕೊಂಡು ದಾಖಲಾತಿ ಪಡೆದುಕೊಂಡು ದೂರನ್ನು ಸಲ್ಲಿಸಲು

ತಡವಾಗಿರುತ್ತದೆ ಅಂತಾ ನುಡಿದಿರುತ್ತಾರೆ. ದೂರುದಾರರು ಈ ದೂರನ್ನು ದಿನಾಂಕ: 29/08/2015 ರಂದು ಸಲ್ಲಿಸಿದ್ದು, ತನಗೆ ನಿ.ಡಿ.1 ಮತ್ತು ನಿ.ಡಿ.2ರ ಬಗ್ಗೆ ಗೊತ್ತಾದ 2 ವರ್ಷಗಳ ನಂತರ ಈ ದೂರನ್ನು ಸಲ್ಲಿಸಿರುತ್ತಾರೆ. ಈ ವಿಲ್ಲಾ ದಾಖಲಾತಿಗಳ ಬಗ್ಗೆ ಗೊತ್ತಿದ್ದರೂ ಸಹಿತ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತಾರೆ ಅಂತಾ ಈ ದೂರನ್ನು ಸಲ್ಲಿಸಿರುತ್ತಾರೆ. ಇದರಲ್ಲಿ ಆ.ಸ.ನೌ ರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ ದೇವನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: 257/2014 ಪ್ರಕರಣವು ಇದೇ ಸರ್ವೆ ನಂಬರ್‌ಗೆ ಸಂಬಂಧಪಟ್ಟಂತೆ ದಾಖಲಾಗಿದ್ದು, ಅದು ಇನ್ನು ಚಾಲ್ತಿಯಲ್ಲಿರುತ್ತದೆ ಅಂತಾ ಹೇಳಿರುತ್ತಾರೆ. ಸದರಿ ದಾವೆಯ ದಾಖಲಾತಿಗಳನ್ನು ಆ.ಸ.ನೌ ರವರು ಗುರುತಿಸಿಕೊಂಡಿರುವುದಿಲ್ಲ, ಆದರೆ ಕಡತದಲ್ಲಿ ಕಡತದಲ್ಲಿ ಸದರಿ ದಾವೆಯ ವಾದ ಪತ್ರ ಇರುತ್ತದೆ. ಸದರಿ ವಾದ ಪತ್ರವನ್ನು ಪರಿಶೀಲಿಸಿದಾಗ, ಇದೇ ಆಸ್ತಿಗೆ ಸಂಬಂಧಪಟ್ಟಂತೆ ಪಿಳ್ಳಮ್ಮನ ಮಕ್ಕಳಾದ ಆಂಜಿನಪ್ಪ ಮತ್ತು ಅಶ್ವತ್ಥಪ್ಪ ಇವರು ಮುನಿನಂಜಪ್ಪ ಮತ್ತು ಇತರರ ವಿರುದ್ಧ ನಿರಂತರ ನಿಬಂಧ೯ಕಾಜ್ಞೆಯನ್ನು ಪರಿಹಾರವನ್ನು ಕೇಳಿ ದಾವೆ ಸಲ್ಲಿಸಿದ್ದು ಇರುತ್ತದೆ. ಸದರಿ ದಾವೆಯು ಇನ್ನು ಚಾಲ್ತಿಯಲ್ಲಿರುತ್ತದೆ ಅಂತಾ ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಕೇಳಿದಾಗ, ಪಿ.ಡಬ್ಲ್ಯೂ.1 ಇವರು ವಿಚಾರಣೆಯಲ್ಲಿದ್ದ ಆಸ್ತಿ ಮತ್ತು ದಾವೆಯಲ್ಲಿದ್ದ ಆಸ್ತಿಯು ಬೇರೆ ಬೇರೆ ಇರುತ್ತವೆ ಅಂತಾ ನುಡಿದಿರುತ್ತಾರೆ. ಕಾರಣ, ಇನ್ನು ಈ ದಾವೆಯು ಸಿವಿಲ್ ನ್ಯಾಯಾಲಯ ದೇವನಹಳ್ಳಿಯಲ್ಲಿ ಚಾಲ್ತಿಯಲ್ಲಿರುತ್ತದೆ ಅಂತಾ ಕಂಡುಬರುತ್ತದೆ.

18. ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2014ಕ್ಕಿಂತ ಮೊದಲು ಸದರಿ 4 ಎಕರೆ ಜಮೀನು ಒಬ್ಬ ಶ್ರೀ. ಶಂಕರ್ ರಾವ್, ಮಾಜಿ ಸೈನಿಕ ಇವರ ಹೆಸರಿನಲ್ಲಿದ್ದು, ಉಪವಿಭಾಗಾಧಿಕಾರಿಗಳು ಆತನಿಗೆ ಗ್ರಾಂಟ್ ಮಾಡಿದ್ದರು. ನಂತರ ಶಂಕರ್ ರಾವ್ ರವರು 1972ನೇ ಸಾಲಿನಲ್ಲಿ ಶ್ರೀ. ಮುನಿಆಂಜಿನಪ್ಪ ರವರಿಗೆ ಪೂರ್ತಿ 4 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಪಿಳ್ಳಮ್ಮನ ಜಮೀನನ್ನು ಶಂಕರ್ ರಾವ್ ರವರಿಗೆ ಕೊಟ್ಟಿರುತ್ತಾರೆ ಅಂತಾ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.13

ಇದು ದೂರುದಾರರ ಪ್ರಕಾರ 153 ಎಕರೆ ಜಮೀನು ಇದ್ದು, ಅದರಲ್ಲಿ ಬೇರೆ ಬೇರೆ ಜನರಿಗೆ ಗ್ರಾಂಟ್ ಮಾಡಲಾಗಿದ್ದು ಇದ್ದು, ಈಗ ಕೇವಲ 19 ಎಕರೆ ಜಮೀನು ಮಾತ್ರ ಇರುತ್ತದೆ ಅಂತಾ ಹೇಳಿರುತ್ತಾರೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಶಂಕರ್ ರಾವ್ ರವರಿಗೆ ಪಿಳ್ಳಮ್ಮನ ಜಮೀನನ್ನು ಕೊಟ್ಟಿರುತ್ತಾರೆ ಅಂತಾ ದೂರುದಾರರು ಸಾಬೀತುಪಡಿಸಿರುವುದಿಲ್ಲ. ದೂರುದಾರರು ತಮ್ಮ ಪಾಟಿಸವಾಲಿನಲ್ಲಿ ಸದರಿ ದಾಖಲಾತಿಗಳು ನಕಲಿಯಾಗಿರುತ್ತದೆ ಅಂತಾ 2014ರಲ್ಲಿ ಕಂದಾಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಅಂತಾ ಹೇಳಿರುತ್ತಾರೆ. 1962ರಲ್ಲಿ ಆದ ದಾಖಲಾತಿಗಳನ್ನು 2014ನೇ ವರ್ಷದಲ್ಲಿ ನಕಲಿ ಆಗಿರುತ್ತದೆ ಅಂತಾ ಯಾವ ಆಧಾರದ ಮೇಲೆ ಹೇಳಿರುತ್ತಾರೆ ಅಂತಾ ಸಾಬೀತುಪಡಿಸಿರುವುದಿಲ್ಲ. ಅಲ್ಲದೇ, ತಮ್ಮ ಪಾಟಿ ಸವಾಲಿನಲ್ಲಿ ಆ.ಸ.ನೌ ರವರ ಅವಧಿಯಲ್ಲಿ ಸದರಿ ದಾಖಲಾತಿಗಳು ಸೃಷ್ಟಿ ಆಗಿರುತ್ತದೆ ಎನ್ನುವುದಕ್ಕೆ ತಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ. ಅಲ್ಲದೇ, ಈ ವಿಚಾರಣೆಯಲ್ಲಿ ಇರುವ ಆಸ್ತಿಗೂ ಮತ್ತು ತನಗೂ ಯಾವುದೇ ಸಂಬಂಧ ಇರುವುದಿಲ್ಲ ಅಂತಾ ಒಪ್ಪಿಕೊಂಡಿರುತ್ತಾರೆ. ಈ ಎಲ್ಲಾ ಸಾಕ್ಷಿಗಳನ್ನು ಪರಿಗಣಿಸಿದಾಗ ಶಿಸ್ತು ಪ್ರಾಧಿಕಾರವು ದೋಷಾರೋಪಣೆಯಲ್ಲಿ ಹೇಳಿದ ವಿಷಯವನ್ನು ರುಜುವಾತುಪಡಿಸಿರುವುದಿಲ್ಲ.

19. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

20.ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

## ನಿರ್ಣಯ

ಆ.ಸ.ನೌಕರ ಶ್ರೀ. ಕೇಶವಮೂರ್ತಿ, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ನಿವೃತ್ತ) ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌರವರ ನಿವೃತ್ತಿ ದಿನಾಂಕ: 31/07/2019 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

25/2

(ಸುದೇಶ್ ರಾಜಾರಾಮ್ ಪರದೇಶಿ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. K. Munikrishna S/o Late Krishnappa C, Contractor, Palace Guttahalli, Bengaluru. |
| 2 | **Documents marked on behalf of the Disciplinary Authority Ex.P-1 to Ex.P-9** | |
| | **Ex.P.1 & 1(a)** | Form No.1 with Signature. |
| | **Ex.P.2 & 2(a)** | Form No.2 with Signature (Affidavit). |
| | **Ex.P.3 & 3(a)** | Complaint given to this institution dtd: 29/08/2015 with Signature. |
| | **Ex.P.4** | Grant Certificate. |
| | **Ex.P.5** | Copy of Darkhast Registrar. |
| | **Ex.P.6** | Sketch map. |
| | **Ex.P.7** | Letter of Tahasildar, Devanahalli Taluk dtd: 02/03/2017. |
| | **Ex.P.8** | Official Memorandum dtd: 07/03/1962 with enclosure. |
| | **Ex.P.9** | Saguvali Cheeti. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Keshavamurthy S/o Late Changaiah, Retired Tahasildar, Kirloskar Colony, Basaveshwaranagar, Bengaluru. |

| 4 | Documents marked on behalf of the DGOs through the complainant | |
|---|---|---|
| | **Ex.D.1** | Order dtd: 06/01/2014 of Tahasildar, Devanahalli Taluk. |
| | **Ex.D.2** | Order dtd: 05/11/2013 of AC, Doddaballapura Sub-Division, Bengaluru. |
| | **Ex.D.3** | Order dtd: 10/04/2007 of AC, Doddaballapura Sub-Division, Bengaluru. |
| | **Ex.D.4** | Copy of Revision Petition No.55/2013-14. |
| | **Ex.D.5** | Corrigendum copy of Revision Petition No.55/2013-14. |
| | **Ex.D.6** | Grant certificate. |
| | **Ex.D.7** | Official memorandum of AC, Doddaballapura Sub-Division, Bengaluru. |
| | **Ex.P.8** | CTC. |

Dated this the 25th February, 2022

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.